ದಿನಾಂಕ : 05-01-2019 ರಂದು ನಡೆದ 3 ನೇ ವಾರ್ಡ್ ಸಮಿತಿ

ಸಭೆಯ ನಡವಳಿಗಳು :-

- ಸದಸ್ಯ ಕಾರ್ಯದರ್ಶಿಗಳು ಹಾಗೂ ಸಹಾಯಕ ಕಂದಾಯ ಅಧಿಕಾರಿಗಳಾದ ಶ್ರೀ ಹೆಚ್. ಎಲ್. ಗುರುಪ್ರಸನ್ನ ರವರು ಮಾತನಾಡುತ್ತಾ ಸಭೆಗೆ ಹಾಜರಾದ ಮಾನ್ಯ ಅಧ್ಯಕ್ಷರು, ಸದಸ್ಯರು ಹಾಗೂ ಪಾಲಿಕೆಯ ಅಧಿಕಾರಿಗಳು/ ವಿವಿಧ ಇಲಾಖೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತ ಕೋರಿದರು.
- ಸಹಾಯಕ ಕಂದಾಯ ಅಧಿಕಾರಿಗಳು ಮಾತನ್ನಾಡುತ್ತಾ ಹಿಂದಿನ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಬಗ್ಗೆ ಚರ್ಚಿಸಬೇಕಾಗಿರುತ್ತದೆಂದು ಸಭೆಗೆ ತಿಳಿಸಿದರು.
- ಸದಸ್ಯರಾದ ಶ್ರೀ ರಮೇಶ್ ಮಾತನಾಡುತ್ತಾ ಜಕ್ಕೂರು ಕೆರೆಯ ಬಗ್ಗೆ ಅಭಿವೃದ್ಧಿ ಕಾರ್ಯ ಕೈ ಗೊಳ್ಳುವಂತೆ ತಿಳಿಸಿದರು,

  ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆರೆಗಳು) ಮತ್ತು ವಾರ್ಡ್‌ಮಟ್ಟದ ಸಹಾಯಕ ಕಾರ್ಯಪಾಲಕ ಅಭಿಯಂತರರು. ಬ್ಯಾಟರಾಯನಪುರ ಉಪವಿಭಾಗ, ದಾಸರಹಳ್ಳಿ.
- ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಕೇಬಲ್ ಮಾಫಿಯಾ ಹೆಚ್ಚಾಗಿದ್ದು ಸುಂದರವಾದ ರಸ್ತೆಗಳನ್ನು ಅಗೆಯುವುದರ ಮೂಲಕ ಪಾಲಿಕೆಗೆ ಯಾವುದೇ ಶುಲ್ಕವನ್ನು ಕಟ್ಟದೇ ಅನಧಿಕೃತವಾಗಿ ಅಗೆಯುತ್ತಿದ್ದು ಇದರ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

  ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು. ಬ್ಯಾಟರಾಯನಪುರ ಉಪವಿಭಾಗ, ದಾಸರಹಳ್ಳಿ.
- ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಕಳೆದ 3 ವರ್ಷಗಳಿಂದ ವಾರ್ಡ್‌ಸಂಖ್ಯೆ : 05 ರ ವ್ಯಾಪ್ತಿಯಲ್ಲಿರುವ ಕೆರೆಗಳ ಅಭಿವೃದ್ಧಿಗಾಗಿ ಖರ್ಚಾಗಿರುವ ಬಗ್ಗೆ ಹಾಗೂ ನಿರ್ವಹಣೆ ಬಗ್ಗೆ ಮಾಹಿತಿಯನ್ನು ನೀಡುವಂತೆ ತಿಳಿಸಿದರು ಹಾಗೂ ಕೆರೆಗೆ ನೀರು ಹೊರಗಡೆಯಿಂದ ಕೆರೆಯ ಒಳಗಡೆ ಹೋಗುವುದಕ್ಕೆ ಕಾಲುವೆಗಳನ್ನು (ಚಾನಲ್) ಮಾಡಿಸಬೇಕೆಂದು ತಿಳಿಸಿದರು.

  ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆರೆಗಳು) ಮತ್ತು ವಾರ್ಡ್‌ಮಟ್ಟದ ಸಹಾಯಕ ಕಾರ್ಯಪಾಲಕ ಅಭಿಯಂತರರು. ಬ್ಯಾಟರಾಯನಪುರ ಉಪವಿಭಾಗ, ದಾಸರಹಳ್ಳಿ.

ಸಮಿತಿಯ ಸದಸ್ಯರಾದ ಶ್ರೀ ರಮೇಶ್ ರವರು ಮಾತನಾಡುತ್ತಾ ಕೊಳಚೆ ನೀರು ಜಕ್ಕೂರು ಕೆರೆಗೆ ಹೋಗುತ್ತಿದ್ದು ಅದನ್ನು ತಡೆಗಟ್ಟುವ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ). ಬ್ಯಾಟರಾಯನಪುರ ಉಪವಿಭಾಗ, ದಾಸರಹಳ್ಳಿ.

ಅಧ್ಯಕ್ಷರು ಮಾತನಾಡುತ್ತಾ ಎಲ್ಲಾ ಸಮಿತಿಯ ಎಲ್ಲಾ ಸದಸ್ಯರುಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಇರುವಂತಹ ವಾರ್ಡಿನ ಸಮುದಾಯದ/ಸಾರ್ವಜನಿಕರ ಸಮಸ್ಯೆಗಳನ್ನು ಮುಕ್ತವಾಗಿ ಸಭೆಯಲ್ಲಿ ಚರ್ಚಿಸುವಂತೆ ತಿಳಿಸಿದರು.

ಶ್ರೀ.ಮುನಿರಾಜು ಸಮಿತಿ ಸದಸ್ಯರು ಮಾತನಾಡುತ್ತಾ ಬೆಳ್ಳಹಳ್ಳಿಯಲ್ಲಿ ಕಸ ಹಾಕುತ್ತಿದ್ದು, ಇದರಿಂದ ನೊಣಗಳು/ವಿಷಕ್ರಿಮಿಗಳು ಬರುತ್ತಿರುವುದರಿಂದ ಸಾರ್ವಜನಿಕರಿಗೆ ಅನಾರೋಗ್ಯ ಸಮಸ್ಯೆ ಉಂಟಾಗುತ್ತಿದ್ದು ಇದರ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು ಹಾಗೂ ಸರ್ಕಾರದಿಂದ ಅನುಮೋದನೆ ಇಲ್ಲದೇ ಹಾಗೂ ವಾರ್ಡ್‌ಸಂಖ್ಯೆ : 05 ರ ಸಾರ್ವಜನಿಕರಿಗೂ ತಿಳಿಸದೇ ಬೆಳ್ಳಹಳ್ಳಿ ಸರ್ಕಲ್ ಟಿಪ್ಪು ಹೆಸರನ್ನು ನಾಮಕರಣ ಮಾಡಲು ಪಾಲಿಕೆಯು ಕ್ರಮ ಕೈಗೊಳ್ಳುತ್ತಿದ್ದು ಇದರಿಂದ ಸದರಿ ವಾರ್ಡಿನ ಸಾರ್ವಜನಿಕರಿಗೆ ವೈಷಮ್ಯ ಉಂಟಾಗುತ್ತಿದೆ ಎಂದು ತಿಳಿಸಿದರು, ಸದರಿ ಫಲಕವು

ರಸ್ತೆಗೆ 8 ಅಡಿ ಮುಂದೆ ಇರುವುದರಿಂದ ಸಂಚಾರ ದಟ್ಟಣೆ ಆಗುತ್ತಿದ್ದು ಸದರಿ ಫಲಕವನ್ನು (ಬೋರ್ಡನ್ನು) ತೆಗೆಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು ಹಾಗೂ ಬಸ್ ಶೆಲ್ಟರ್ ಮೇಲೆ ಅನಧಿಕೃತವಾಗಿ ಟಿಪ್ಪು ಹೆಸರಿನ ಬೋರ್ಡ್ ಹಾಕಿಸಿದ್ದು, ಇದನ್ನು ತೆಗೆಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ಉಪವಿಭಾಗ, ದಾಸರಹಳ್ಳಿ.

- ಸಮಿತಿ ಸದಸ್ಯರಾದ ಶ್ರೀ ಮುನಿಯಪ್ಪ ರವರು ಮಾತನಾಡುತ್ತಾ ದ್ವಾರಕಾನಗರದ ಮೋರಿಯಲ್ಲಿ ನೀರು ಸರಾಗವಾಗಿ ಹರಿಯದೇ ನಿಂತಿರುವುದರಿಂದ ನೊಣಗಳು/ವಿಷಕ್ರಿಮಿಗಳು ಉತ್ಪತ್ತಿಯಾಗುತ್ತಿದ್ದು ಇದರಿಂದ ಸಾರ್ವಜನಿಕರಿಗೆ ಅನಾರೋಗ್ಯ ಸಮಸ್ಯೆ ಉಂಟಾಗುತ್ತಿದ್ದು ಸದರಿ ಮೋರಿಗಳನ್ನು ಸ್ವಚ್ಛಗೊಳಿಸುವಂತೆ ತಿಳಿಸಿದರು.

  ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ಉಪವಿಭಾಗ, ದಾಸರಹಳ್ಳಿ, ಹಿರಿಯ ಆರೋಗ್ಯ ನಿರೀಕ್ಷಕರು, ಬ್ಯಾಟರಾಯನಪುರ ಉಪವಿಭಾಗ.

- ಸಮಿತಿ ಸದಸ್ಯರಾದ ಶ್ರೀ ಸೋಮಶೇಖರ್ ರವರು ಮಾತನಾಡುತ್ತಾ ತಿರುಮೇನಹಳ್ಳಿ ಕೆರೆಯ, ರಾಜಕಾಲುವೆ ಮುಚ್ಚಿರುವುದರಿಂದ ಇದನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಿದರು.

  ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು (ರಾಜ ಕಾಲುವೆ).

- ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಕೋಗಿಲು ಬಡಾವಣೆಯಲ್ಲಿ ವಿದ್ಯುತ್ ಕಂಬಗಳೂ ಬೀಳುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುವುದರಿಂದ ಇದರ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

  ಕ್ರಮ -BESCOM.

- ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಜಕ್ಕೂರು, ಕಟ್ಟಿಗೇನಹಳ್ಳಿ, ಪಾಲನಹಳ್ಳಿ ಕೆರೆಗಳಿಗೆ STP ಘಟಕ ಅನುಮೋದನೆಯಾಗಿದ್ದು, ಸದರಿ ಕೆರೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

  ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆರೆಗಳು).

- ಕಟ್ಟಿಗೇನಹಳ್ಳಿ, ದ್ವಾರಕನಗರ, ಪಾಲನಹಳ್ಳಿ ಗಳಿಗೆ ಕಾವೇರಿ ನೀರು ನೀಡುವುದಕ್ಕೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು ಹಾಗೂ ಸರ್ಕಾರದಿಂದ ಅನುದಾನ (ಗ್ರಾಂಟ್) ಬಂದಿದ್ದು, ಕಾರ್ಯ ಕ್ರಮವು ಪ್ರಗತಿಯಲ್ಲಿ ನಡೆಯುತ್ತಿದೆ ಎಂದು ತಿಳಿಸಿದರು.

  ಕ್ರಮ : ಬಿ. ಡಬ್ಲ್ಯೂ. ಎಸ್. ಎಸ್. ಬಿ.

- ಸಮಿತಿಯ ಸದಸ್ಯರಾದ ಶ್ರೀ ರಮೇಶ್ ರವರು ಮಾತನಾಡುತ್ತಾ ಜಕ್ಕೂರಿನ ರೈಲ್ವೆಟ್ರ್ಯಾಕ್ ಹತ್ತಿರ ಇರುವ ಎರಡು ರಸ್ತೆಗಳು ಕಿತ್ತು ಹೋಗಿದ್ದು ಹಾಗೂ ಹಳೆಯದಾಗಿದ್ದು ಇದನ್ನು ಸರಿಪಡಿಸುವಂತೆ ತಿಳಿಸಿದರು ಹಾಗೂ ಸಂಪಿಗೇಹಳ್ಳಿ ಕೆರೆಯ ಅಕ್ಕಪಕ್ಕದಲ್ಲಿ ಬೀದಿದೀಪಗಳು ಇಲ್ಲದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಇದನ್ನು ಸರಿಪಡಿಸುವಂತೆ ತಿಳಿಸಿದರು.

  ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು (ಪ್ರಾಜೆಕ್ಟ್) ಕಾರ್ಯಾಪಾಲಕ ಅಭಿಯಂತರರು, (ವಿದ್ಯುತ್) ಬ್ಯಾಟರಾಯನಪುರ ಉಪವಿಭಾಗ.

- ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ವಾರ್ಡ್‌ನಂ : 05 ರ ವ್ಯಾಪ್ತಿಯು ಅಭಿವೃದ್ಧಿ ಹೊಂದುತ್ತಿರುವುದರಿಂದ ಸಾರ್ವಜನಿಕರಿಗೆ ಕುಡಿಯುವ ನೀರಿನ ಅವಶ್ಯಕತೆ ಹೆಚ್ಚಿದ್ದು, ಹೊಸ ಬೋರ್‌ವೆಲ್‌ಗಳನ್ನು ಹಾಕಿಸುವಂತೆ ತಿಳಿಸಿದರು ಹಾಗೂ ಹಾಕಿರುವ ಬೋರ್‌ವೆಲ್‌ಗಳನ್ನು ಪಾಲಿಕೆಗೆ ಹಸ್ತಾಂತರ ಮಾಡುವಂತೆ ತಿಳಿಸಿದರು.

ಕ್ರಮ : ಬಿ. ಡಬ್ಲ್ಯೂ. ಎಸ್. ಎಸ್. ಬಿ.

- ಸಮಿತಿಯ ಸದಸ್ಯರಾದ ಶ್ರೀ ಮುನಿರಾಜು ಮಾತನಾಡುತ್ತಾ ಬೋರ್‌ವೆಲ್‌ಗಳಲ್ಲಿರುವ ಹಳೆಯ ಮೋಟರ್‌ಗಳನ್ನು ತೆಗೆದು ಹೊಸ ಮೋಟರ್‌ಗಳನ್ನು ಹಾಕುತ್ತಿದ್ದು ಇದರ ಗುಣಮಟ್ಟ ಕಡಿಮೆ ಇರುತ್ತದೆ ಹಾಗೂ 750 ಅಡಿಯಲ್ಲಿ ನೀರಿದ್ದರೆ ಬಿ. ಡಬ್ಲ್ಯೂ. ಎಸ್. ಎಸ್. ಬಿ. ಸದರಿ ಯವರು 510 ಅಡಿ ಪೈಪ್ ಬಿಡುತ್ತಿದ್ದು ನೀರು ಮೇಲೆ ಹೇಗೆ ಬರುತ್ತದೆ ಎಂದು ತಿಳಿಸುತ್ತಾ ಇದರ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಕ್ರಮ –ಬಿ. ಡಬ್ಲ್ಯೂ. ಎಸ್. ಎಸ್. ಬಿ.

- ಸಮಿತಿಯ ಸದಸ್ಯರಾದ ಶ್ರೀಮತಿ ಲಕ್ಷ್ಮಮ್ಮರವರು ಮಾತಾನಾಡುತ್ತಾ ಶ್ರೀನಿವಾಸಪುರದಲ್ಲಿ 2 ಬೋರ್‌ವೆಲ್‌ಗಳು ಒಣಗಿದ್ದು 350 ಮನೆಗಳಿಗೆ ನೀರಿನ ಸಮಸ್ಯೆಯಾಗಿದ್ದು ಇದರ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಕ್ರಮ –ಬಿ. ಡಬ್ಲ್ಯೂ. ಎಸ್. ಎಸ್. ಬಿ.

- ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಸದರಿ ಶ್ರೀನಿವಾಸಪುರದಲ್ಲಿ ನೀರಿನ ಸಮಸ್ಯೆಯಿದ್ದು, ಸದರಿ ವಾರ್ಡಿನ 14 ಬೋರ್‌ವೆಲ್‌ಗಳು ಕೆಟ್ಟು ಹೋಗಿದ್ದು, ನೀರಿನ ಸಮಸ್ಯೆ ಉದ್ಭವಿಸಿದ್ದು, ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದರು

ಕ್ರಮ –ಬಿ. ಡಬ್ಲ್ಯೂ. ಎಸ್. ಎಸ್. ಬಿ.

- ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಸದರಿ ವಾರ್ಡಿನ ವ್ಯಾಪ್ತಿಯಲ್ಲಿ ಕಾವೇರಿ ನೀರಿನ ಬಗ್ಗೆ ಚರ್ಚಿಸಲು ಎ.ಆರ್. ಕಲ್ಯಾಣ ಮಂಟಪದಲ್ಲಿ ಸಭೆಯನ್ನು ಕರೆಯಲಾಗುವ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

- ಜಕ್ಕೂರಲ್ಲಿ ಪೂಜಾ ಮಹಾಲಕ್ಷ್ಮಿ ಲೇಔಟ್‌ನಲ್ಲಿ ಸ್ಯಾನಿಟರಿ ನೀರು ಹರಿದು ಹೊಗುತ್ತಿದ್ದು, ಮುಖ್ಯ ದ್ವಾರಗಳಿಂದ ಉಪ ದ್ವಾರಗಳಿಗೆ ಜೋಡಣೆ ಮಾಡದಿರುವುದರಿಂದ ಇರುವುದರಿಂದ ಸಮಸ್ಯೆ ಉದ್ಭವಿಸಿದ್ದು ಇದರ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ವಾರ್ಡಿನಲ್ಲಿ ಕಸ ವಿಲೇವಾರಿಯಲ್ಲಿ 3 ಆಟೋಗಳು ಕಾರ್ಯ ನಿರ್ವಹಿಸುತ್ತಿದ್ದು, ಸದರಿ ವಾರ್ಡ್ ದೊಡ್ಡದಾಗಿದ್ದು, ಹೆಚ್ಚುವರಿ ಪೌರ ಕಾರ್ಮಿಕರು ಮತ್ತು ಹೆಚ್ಚುವರಿ ವಾಹನಗಳು ಬೇಕಾಗಿರುವುದರಿಂದ ಹೆಚ್ಚುವರಿ ಪೌರಕಾರ್ಮಿಕರು ಮತ್ತು ವಾಹನಗಳನ್ನು ನಿಯೋಜಿಸುವಂತೆ ತಿಳಿಸಿದರು.

ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ)

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಅಗ್ರಹಾರ ಬಡಾವಣೆಯಲ್ಲಿ ವಿಶೇಷ ಸೂಚನಾ ಪತ್ರ ನೀಡಿದ ಮೇಲೆ ಖಾತಾ ನಕಲು ಪ್ರಮಾಣ ಪತ್ರ ನೀಡುವ ಬಗ್ಗೆ ಕ್ರಮ ತೆಗೆದುಕೊಳ್ಳಲು ತಿಳಿಸಿದರು.

ಕ್ರಮ : ಸಹಾಯಕ ಕಂದಾಯ ಅಧಿಕಾರಿ, ಬ್ಯಾಟರಾಯನಪುರ ಉಪವಿಭಾಗ

ಸಂಪಿಗೇಹಳ್ಳಿಯಲ್ಲಿರುವ 9 ಮತದಾನ ಕೇಂದ್ರ ಒಂದೇ ಕಡೆ ಮಾಡಿದ್ದು, ತುಂಬಾ ದೂರ ಇರುವುದರಿಂದ ಸಾರ್ವಜನಿಕರಿಗೆ ಮತದಾನ ಮಾಡಲು ತೊಂದರೆಯಾಗುತ್ತಿದ್ದು ಚೊಕ್ಕನಹಳ್ಳಿಯಲ್ಲಿ ಸರ್ಕಾರಿ ಶಾಲೆಗೆ 3 ಮತದಾನ ಕೇಂದ್ರಗಳನ್ನು ವಿಭಜಿಸಿ ಸ್ಥಳಾಂತರ ಮಾಡುವಂತೆ ತಿಳಿಸಿದರು.

ಕ್ರಮ : ಕಂದಾಯ ಅಧಿಕಾರಿ/ಸಹಾಯಕ ಕಂದಾಯ ಅಧಿಕಾರಿ, ಬ್ಯಾಟರಾಯನಪುರ ಉಪವಿಭಾಗ.

➢ ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಸದರಿ ಸಭೆಗೆ ಎಲ್ಲಾ ಇಲಾಖೆಗಳಿಗೂ ಸಭಾ ತಿಳುವಳಿಕೆ ಪತ್ರಗಳನ್ನು ಕಳುಹಿಸಿದ್ದರೂ ಪೋಲಿಸ್ ಇಲಾಖೆ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆರೆಗಳು), ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ಸಹಾಯಕ ನಿರ್ದೇಶಕರು (ನಗರ ಯೋಜನೆ) ಬ್ಯಾಟರಾಯನಪುರ ಉಪವಿಭಾಗ ರವರುಗಳು ಸಭೆಗೆ ಹಾಜರಾಗದೇ ಇರುದ್ದರಿಂದ ವಾರ್ಡಿನ ಸಮಸ್ಯೆಗಳನ್ನು ಪೂರ್ಣವಾಗಿ ಪರಿಹರಿಸುವ ಬಗ್ಗೆ ಕ್ರಮ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಮುಂದಿನ ಸಭೆಗೆ ವಾರ್ಡ್ ಸಮಿತಿಯ ಸದಸ್ಯರುಗಳು ಹಾಗೂ ಎಲ್ಲಾ ಇಲಾಖೆಗಳ ಅಧಿಕಾರಿಗಳು ತಪ್ಪದೇ ಹಾಜರಾಗಬೇಕೆಂದು ತಪ್ಪಿದ್ದಲ್ಲಿ ಸದರಿ ಇಲಾಖೆಗಳ ಬಗ್ಗೆ ಕ್ರಮ ಕೈ ಗೊಳ್ಳುವ ಬಗ್ಗೆ ಗೌರವಾನ್ವಿತ ನ್ಯಾಯಾಲಯದ ಗಮನಕ್ಕೆ ತರಬೇಕೆಂದು ಸದಸ್ಯ ಕಾರ್ಯದರ್ಶಿಗಳಿಗೆ ತಿಳಿಸಿದರು.

ಕ್ರಮ : ಸದಸ್ಯ ಕಾರ್ಯದರ್ಶಿಗಳು, ವಾರ್ಡ್ ಸಮಿತಿ.

➢ ಸದಸ್ಯ ಕಾರ್ಯದರ್ಶಿಗಳಾದ ಆದ ಶ್ರೀ ಹೆಚ್. ಎಲ್. ಗುರುಪ್ರಸನ್ನ ರವರು ಸಭೆಗೆ ಹಾಜರಾದ ಎಲ್ಲಾ ಸದಸ್ಯರಿಗೂ ಹಾಗೂ ಅಧಿಕಾರಿಗಳು/ನೌಕರರಿಗೂ ವಂದನೆಗಳನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

05/01

(ಗುರುಪ್ರಸನ್ನ ಹೆಚ್. ಎಲ್)
ಸದಸ್ಯ ಕಾರ್ಯದರ್ಶಿ-ವಾರ್ಡ್ -05 ಹಾಗೂ
ಸಹಾಯಕ ಕಂದಾಯ ಅಧಿಕಾರಿ,
ಬ್ಯಾಟರಾಯನಪುರ ಉಪವಿಭಾಗ

5/1/19

ನ್ನು:

- ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
- ಜಂಟಿ ಆಯುಕ್ತರು, (ಆರೋಗ್ಯ), (ಕೇಂದ್ರ ಕಛೇರಿ) ರವರ ಮಾಹಿತಿಗಾಗಿ ಸಲ್ಲಿಸಿದೆ.
- ಜಂಟಿ ಆಯುಕ್ತರು/ಉಪ ಆಯುಕ್ತರು ಯಲಹಂಕ ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಕೌನ್ಸಿಲ್ ಕಾರ್ಯದರ್ಶಿ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಕಾ.ಪಾ.ಅ (ಬ್ಯಾಟರಾಯನಪುರ) ರವರ ಮಾಹಿತಿಗಾಗಿ ಸಲ್ಲಿಸಿದೆ.
- ವಾರ್ಡ್ 05 ರ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ರವರಿಗೆ.
- ಪೋಲಿಸ್ ಇನ್ಸ್‌ಪೆಕ್ಟರ್ : ಯಲಹಂಕ ಉಪನಗರ, ಸಂಪಿಗೇಹಳ್ಳಿ,ಬಾಗಲೂರು, ಚಿಕ್ಕಜಾಲ, ಅಮೃತಹಳ್ಳಿ, ಠಾಣೆಗಳು ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
- ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ. ಡಬ್ಲ್ಯೂ. ಎಸ್. ಎಸ್. ಬಿ.ಸಹಕಾರನಗರ, ಬ್ಯಾಟರಾಯನಪುರ.ಬೆಂಗಳೂರು-92.
- ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ-ಸಿ-7, ಯಲಹಂಕ/ಸಿ-8, ಸಹಕಾರನಗರ. ಬ್ಯಾಟರಾಯನಪುರ.ಬೆಂಗಳೂರು-92.